# ಸುಸ್ಥಿರತೆ ಬೆಸದ ಸತ್ವ ಗ್ರೂಪ್

**ಬೆಂಗಳೂರು:** ಭಾರತದ ಪ್ರಮುಖ ಪ್ರಾಪರ್ಟಿ ಡೆವಲಪ್ ಮೆಂಟ್, ನಿರ್ವಹಣೆ, ಮತ್ತು ಸಲಹಾ ಸಂಸ್ಥೆಗಳಲ್ಲಿ ಒಂದಾದ ಸತ್ವ ಗ್ರೂಪ್ ಸತ್ವ ಗ್ಲೋಬಲ್ ಸಿಟಿ ಫೆಸ್ಟ್ –2023 ಎಂಬ ಎರಡು ದಿನಗಳ ಮೆಗಾ ಕಾರ್ಯಕ್ರಮ ಆಯೋಜಿಸಿತ್ತು. ಸಮುದಾಯ ಅಭಿವೃದ್ಧಿ ಮತ್ತು ಜಾಗೃತಿ ಸಾಧಿಸಲು ಕ್ರೀಡೆ ಮತ್ತು ಸುಸ್ಥಿರ ಪ್ರಯತ್ನಗಳ ಮೂಲಕ ಜನರನ್ನು ಒಟ್ಟುಗೂಡಿಸಲು ಫೆ.18 ರಿಂದ ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು. ಸತ್ವ ಸೇರಿದಂತೆ ಒಟ್ಟು 14 ತಂಡಗಳು ಪಾಲ್ಗೊಂಡು, ಉತ್ತಮ ಪ್ರದರ್ಶನ ನೀಡಿದವು. ಅಂತಿಮ ಪಂದ್ಯವನ್ನು ಕೇಪ್ ಜೆಮಿನಿ ಮತ್ತು ಡಿಮಾಗ್ ಎಐ ತಂಡಗಳ ನಡುವೆ ನಡೆದು, ಚಾಂಪಿಯನ್ ಆಗಿ ಕೇಪ್ ಜೆಮಿನಿ ತಂಡ ಹೊರಹೊಮ್ಮಿತು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಖಿ) ಮತ್ತು ಆರ್.ವಿ.ಎಂಜಿನಿಯರಿಂಗ್ ಕಾಲೇಜಿನ ತಂಡವು ಕಾರ್ಯಕ್ರಮ ಪರಿಸರ ಸ್ನೇಹಿ ಮತ್ತು ಸುಸ್ಥಿರವಾಗಿರಲು ಉತ್ತಮ ರೀತಿಯಲ್ಲಿ ಹೆಚ್ಚು ಪರಿಶ್ರಮದಿಂದ ಕೆಲಸ ಮಾಡಿದೆ. ಉತ್ಸವದಲ್ಲಿ ಚಾಂಪಿಯನ್ ಕ್ರಿಕೆಟರ್, ಬೆಂಗಳೂರಿನ ಡೇವಿಡ್ ಜಾನ್ಸನ್ ಭಾಗವಹಿಸಿದ್ದರು. ಸತ್ವ ಗ್ರೂಪ್ ಕಾರ್ಯತಂತ್ರ ಅಭಿವೃದ್ಧಿ ವಿಭಾಗ ಉಪಾಧ್ಯಕ್ಷ ರಾದ ಶಿವಂ ಅಗರ್ ವಾಲ್, ಸಂಜಯ್ ಅಗರ್ ವಾಲ್ ಸೇರಿದಂತೆ ಇತರೆ ಗಣ್ಯರಿದ್ದರು.

